
ಸಣ್ಣ ಟಿಂವ್ ಹಕ್ಕಿ ಉಲಿದಂತೆ
ಅವನ ಮುತ್ತಿನ ಸದ್ದು
ಅಳೆದೂ ಸುರಿದೂ ನಾಚಿಕೊಂಡು ಹೇಳಿಬಿಟ್ಟರೆ
ನೀನು ನಾಚಿಕೊಂಡ ಶಬ್ದ
ಗುಡ್ಡದ ಬೊಮ್ಮಯ್ಯ ದೇವರ ಕಂಚಿನ ಗಂಟೆ
ಹತ್ತೂರಿಗೆ ಕೇಳುತ್ತದೆ ಎನ್ನುತ್ತ
ಒಂದು ತಾಸು ನಗುತ್ತಾನೆ

ಹತ್ತಿರ ಕುಳಿತರೆ ಕಿವಿ ಮುಟ್ಟುತ್ತಾನೆ
ಜುಮಕಿ ಅಲುಗಿಸುತ್ತಾನೆ
ಒಂದು ಮುಂಗುರುಳು ನಾಜೂಕಾಗಿ ಕಿತ್ತು
ಕಿಸೆಯಲ್ಲಿಟ್ಟುಕೊಳ್ಳುತ್ತಾನೆ
ಅವನ ಪಾದದ ಮೇಲೆ ನನ್ನ ಪಾದವನ್ನಿಡು
ಎಂದು ಸನ್ನೆ ಮಾಡುತ್ತಾನೆ
ಇಂದೆಂಥ ಮಳ್ಳು ಆಟ
ನನ್ನ ಕೆನ್ನೆ ತುಟಿ ಎದೆ ತೋಳು ಎಲ್ಲ
ಪಕ್ಕದಲ್ಲೇ ಇರುವಾಗ

ಇರುವಿಕೆಗಿಂತ ಅಗಲುವಿಕೆಯಲ್ಲೇ
ಹೆಚ್ಚು ಕಾಡುತ್ತಾನೆ ನಗುತ್ತಾನೆ
ಮತ್ತೆ ಮತ್ತೆ ಮುಗಿಯದೇ ಮಾತಾಡುತ್ತಾನೆ
ಅವನು ನನಗಾಗಿ, ನಾನು ಅವನಿಗಾಗಿ
ಈ ತುಂತುರು ಮಳೆಯಲ್ಲಿ ಹೀಗೆ
ಕಾಯುತ್ತಿರುವುದು ಒಂದು ಚಂದದ ಕವಿತೆ ಅಂತ
ನಿಮಗೆ ಅನಿಸುತ್ತಿಲ್ಲವೆ

ಖರೆ ಹೇಳಿ...

● ರೇಣುಕಾ ರಮಾನಂದ



ವಾಗೀಶ ಹೆಗಡೆ